# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 635 (743) |
| ಸದಸ್ಯರ ಹೆಸರು | : | ಶ್ರೀ ಡಿ.ಎಸ್. ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 10.03.2026 |
| ಉತ್ತರಿಸುವ ಸಚಿವರು | : | ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಕರ್ನಾಟಕದ ಹೆಮ್ಮೆಯ ಕೆ.ಎಸ್.ಡಿ.ಎಲ್ (KSDL) ಸಂಸ್ಥೆಯ ಮೈಸೂರು ಸ್ಯಾಂಡಲ್ ಸೋಪಿನ ರಾಯಭಾರಿಯಾಗಿ (Brand Ambassador) ಬಹುಭಾಷಾ ನಟಿಯನ್ನು ಆಯ್ಕೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ರಾಯಭಾರಿಯ ಆಯ್ಕೆಗಾಗಿ ಸರ್ಕಾರ ಅನುಸರಿಸಿದ ಮಾನದಂಡಗಳೇನು; ಅವರಿಗೆ ಪಾವತಿಸಲಾಗುತ್ತಿರುವ ಸಂಭಾವನೆ ಎಷ್ಟು; | ಹೌದು.<br><br>ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತವು (KSDL) ತನ್ನ ಉತ್ಪನ್ನಗಳ ಪ್ರಚಾರಕ್ಕಾಗಿ ಬಹುಭಾಷಾ ನಟಿ ತಮನ್ನಾ ಭಾಟಿಯಾ ಅವರನ್ನು ಬ್ರ್ಯಾಂಡ್ ಅಂಬಾಸಿಡರ್ ಆಗಿ ನೇಮಿಸಿಕೊಳ್ಳಲು ಅಧಿಸೂಚನೆ ಸಂಖ್ಯೆ: ಆಇ 283 ವೆಚ್ಚ-12/2025, ದಿನಾಂಕ: 21.05.2025 ರಲ್ಲಿ ಕೆ.ಟಿ.ಪಿ.ಪಿ ಕಾಯ್ದೆಯ ಕಲಂ 4(ಜಿ) ರಡಿ ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿ ನೀಡಲಾಗಿರುತ್ತದೆ.<br><br>ಕೆ.ಎಸ್.ಡಿ.ಎಲ್ ಸಂಸ್ಥೆಯ ಉತ್ಪನ್ನಗಳನ್ನು ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಮಟ್ಟದಲ್ಲಿ ಹೆಚ್ಚಿನ ಪ್ರಚಾರ ಮಾಡುವ ಸಲುವಾಗಿ ಮತ್ತು ಅಧಿಕ ಆದಾಯ ತರುವ ಉದ್ದೇಶದಿಂದ ಬ್ರ್ಯಾಂಡ್ ಅಂಬಾಸಿಡರ್ ನೇಮಿಸುವ ಸಂದರ್ಭದಲ್ಲಿ ಚಲನಚಿತ್ರ ನಟರ ಪ್ಯಾನ್ ಇಂಡಿಯಾ ಮತ್ತು ಅಂತರಾಷ್ಟ್ರೀಯ ಖ್ಯಾತಿಯ ಡಿಜಿಟಲ್ ಮಾಧ್ಯಮ ಮತ್ತು ಯುವಜನತೆ ಜೊತೆ ಬಲವಾದ ಸಂಪರ್ಕ ಲಭ್ಯತೆ, ಬ್ರ್ಯಾಂಡ್ ನ ಜೊತೆ ಹೊಂದಾಣಿಕೆಯಾಗುವ ವೈಶಿಷ್ಟ್ಯತೆಗಳು ಮತ್ತು ವ್ಯಾಪಾರದ ವಿಸ್ತರಣೆ ಯೋಜನೆ ಅಂಶಗಳ ಮಾನದಂಡಗಳ ಆಧಾರದ ಮೇಲೆ ಬ್ರ್ಯಾಂಡ್ ಅಂಬಾಸಿಡರ್ ಆಯ್ಕೆ ಮಾಡಲಾಗುತ್ತದೆ.<br><br>ತಮನ್ನಾ ಭಾಟಿಯರವರು ಪ್ಯಾನ್ ಇಂಡಿಯಾ ಖ್ಯಾತಿಯನ್ನು ಹೊಂದಿದ್ದು, ದೇಶ ಮತ್ತು ಅಂತರಾಷ್ಟ್ರೀಯ ಮಟ್ಟದ ಸಾಮಾಜಿಕ ಅಂತರ್ಜಾಲ ತಾಣಗಳಲ್ಲಿ 28.3 ಮಿಲಿಯನ್ ಅಭಿಮಾನಿ ಬಳಗವನ್ನು ಹೊಂದಿರುತ್ತಾರೆ. ಈ ಎಲ್ಲಾ ಅಂಶಗಳನ್ನು ಅವಲೋಕಿಸಿ ಇವರನ್ನು ಮೈಸೂರು ಸ್ಯಾಂಡಲ್ ಸೋಪ್ ನ ಬ್ರ್ಯಾಂಡ್ ಅಂಬಾಸಿಡರ್ ಆಗಿ ನೇಮಕ ಮಾಡಲಾಗಿದೆ. |

| | | |
|---|---|---|
| | | ಬ್ರ್ಯಾಂಡ್ ಅಂಬಾಸಿಡರ್ ಆಗಿ ನೇಮಕ ಮಾಡಿಕೊಂಡಿರುವ ತಮನ್ನಾ ಭಾಟಿಯ ಅವರಿಗೆ ಎರಡು ವರ್ಷದ ಅವಧಿಗೆ ರೂ. 6.20 ಕೋಟಿ ಸಂಭಾವನೆಯನ್ನು ನಿಗದಿಪಡಿಸಲಾಗಿರುತ್ತದೆ. |
| (ಆ) | ಕನ್ನಡ ಚಿತ್ರರಂಗದಲ್ಲಿ ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿ ಗಳಿಸಿದ ನಟಿಯರಿದ್ದರೂ, ಹೊರಗಿನವರನ್ನು ಆಯ್ಕೆ ಮಾಡಲು ಕಾರಣವೇನು: | ಕರ್ನಾಟಕ ರಾಜ್ಯದಲ್ಲಿ ಕಂಪನಿಯ ಉತ್ಪನ್ನಗಳ ಮಾರಾಟ ವಹಿವಾಟು ಶೇಕಡ 15% ರಷ್ಟು ಇದ್ದು ಉಳಿದ ರಾಜ್ಯಗಳಲ್ಲಿ ಶೇಕಡ 85% ರಷ್ಟು ಹೊಂದಿರುತ್ತದೆ. ಆದ್ದರಿಂದ ಪ್ಯಾನ್ ಇಂಡಿಯಾ ಖ್ಯಾತಿಯ ನಟಿಯಾದ ತಮನ್ನಾ ಭಾಟಿಯಾ ರನ್ನು ಬ್ರ್ಯಾಂಡ್ ಅಂಬಾಸಿಡರ್ ಆಗಿ ನೇಮಕ ಮಾಡಲಾಗಿದೆಯೇ ಹೊರತು ಯಾವುದೇ ತಾರತಮ್ಯಕ್ಕೆ ಆಸ್ಪದ ನೀಡಿರುವುದಿಲ್ಲ. |
| (ಇ) | ರಾಜ್ಯದ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳ ಪ್ರಚಾರಕ್ಕೆ ಸ್ಥಳೀಯ ಪ್ರತಿಭೆಗಳನ್ನು ಮತ್ತು ಕನ್ನಡದ ಕಲಾವಿದರನ್ನು ಕಡೆಗಣಿಸಿರುವುದು ಕನ್ನಡ ವಿರೋಧಿ ನೀತಿಯಲ್ಲವೇ; | ಅದೇ ರೀತಿ ಕೆ.ಎಸ್.ಡಿ.ಎಲ್ ಸಂಸ್ಥೆಯು ತನ್ನ ಉತ್ಪನ್ನಗಳಿಗೆ ಕನ್ನಡದ ಜನಪ್ರಿಯ ನಟ / ನಟಿಯರಾದ ಕುಮಾರಿ ಸಾನಿಯಾ ಅಯ್ಯರ್, ಕುಮಾರಿ ಅರಾಧನಾ, ಕುಮಾರಿ ಐಶಾನಿ ಶೆಟ್ಟಿ ಮತ್ತು ಶ್ರೀ ಶ್ರೀನಿವಾಸ ಮೂರ್ತಿ ಇವರುಗಳನ್ನು ಸಹ ಪ್ರಚಾರ ರಾಯಭಾರಿಗಳನ್ನಾಗಿ ನೇಮಿಸಿಕೊಳ್ಳಲಾಗಿದೆ.<br><br>ಕೆ.ಎಸ್.ಡಿ.ಎಲ್ ಸಂಸ್ಥೆಯು ಕನ್ನಡಿಗರ ಹೆಮ್ಮೆಯ ಉದ್ಯಮವಾಗಿರುತ್ತದೆ. ಇಲ್ಲಿ ಕನ್ನಡ ಮತ್ತು ಕನ್ನಡಿಗರಿಗೆ ಮೊದಲ ಆದ್ಯತೆಯನ್ನು ನೀಡುತ್ತಾ ಬರಲಾಗುತ್ತಿದೆ. ಯಾವುದೇ ಸಂದರ್ಭದಲ್ಲೂ ಸಂಸ್ಥೆಯು ಕನ್ನಡ ವಿರೋಧಿ ನೀತಿಯನ್ನು ಅನುಸರಿಸಿರುವುದಿಲ್ಲ. |
| (ಈ) | ಈ ನೇಮಕಾತಿಗೆ ಸಂಬಂಧಿಸಿದಂತೆ ಸಾರ್ವಜನಿಕ ವಲಯದಲ್ಲಿ ಮತ್ತು ಜನಪ್ರತಿನಿಧಿಗಳಲ್ಲಿ ವ್ಯಕ್ತವಾಗುತ್ತಿರುವ ತೀವ್ರ ಆಕ್ಷೇಪಗಳ ಬಗ್ಗೆ ಸರ್ಕಾರವು ಮರುಪರಿಶೀಲನೆ ನಡೆಸುವುದೇ? | ಬಹುಭಾಷಾ ನಟಿ ತಮನ್ನಾ ಭಾಟಿಯಾ ಅವರನ್ನು ಉತ್ಪನ್ನಗಳ ಪ್ರಚಾರ ರಾಯಭಾರಿಯಾಗಿ ನೇಮಿಸಿರುವ ಬಗ್ಗೆ ಹಲವು ಕನ್ನಡ ಪ್ರೇಮಿಗಳಿಂದ ಭಾಷಾಭಿಮಾನ ಪೂರ್ವಕವಾಗಿ ಆಕ್ಷೇಪಗಳು ವ್ಯಕ್ತವಾಗಿರುತ್ತವೆ. ಈ ಸಂದರ್ಭದಲ್ಲಿ ಕಂಪನಿಯ ಉತ್ಪನ್ನಗಳ ಮಾರಾಟ ದೃಷ್ಟಿಯಿಂದ ಕೈಗೊಂಡ ಸಂಸ್ಥೆಯ ನಿಲುವುಗಳು ಮತ್ತು ವಾಸ್ತವಾಂಶಗಳನ್ನು ಅವರುಗಳಿಗೆ ಮನವರಿಕೆ ಮಾಡಲಾಗಿರುತ್ತದೆ. ಆಕ್ಷೇಪಗಳಿಗಿಂತ ಅಧಿಕ ಪ್ರಮಾಣದಲ್ಲಿ ರಾಯಭಾರಿ ನೇಮಕದ ಬಗ್ಗೆ ಸಾರ್ವಜನಿಕರು / ಗ್ರಾಹಕರಿಂದ ಹೆಚ್ಚಿನ ಪ್ರಶಂಸೆಗಳು ವ್ಯಕ್ತವಾಗಿವೆ. |

**ಸಂಖ್ಯೆ: ಸಿಐ 22 ಸಿಪಿಎಂ 2026 (ಇ)**

**(ಎಂ.ಬಿ. ಪಾಟೀಲ)**
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ ಸಚಿವರು